ಕೆಳಗಿಳಿದು ಬಂದು, ಮುಂದಿನ ಸಾಲಿನಲ್ಲಿ ಕುಳಿತ ಅಮ್ಮನ ಕೊರಳಿಗೆ ಕೆಂಪು ಗುಲಾಬಿ ಹೂವಿನ ಹಾರ ಹಾಕಿದಾಗ ಅಮ್ಮ ಖುಷಿಪಟ್ಟಿದ್ದಳು. ಆ ಕ್ಷಣ, ನನಗೆ ಇಂತಹ ಸಂದರ್ಭವನ್ನು ಒದಗಿಸಿಕೊಟ್ಟ ನನ್ನ ಬರಹ ಸಾರ್ಥಕವಾಯಿತು ಅನಿಸಿತ್ತು.

ಮೂರು ತಿಂಗಳ ಹಿಂದೆ ಬಂದ ಮಹಿಳೆಯೊಬ್ಬರ ಪತ್ರ ಒಂದು ಕ್ಷಣ ಎದೆ ನಡುಗಿಸಿತ್ತು. ಆಕೆ ತನ್ನ ಮಕ್ಕಳನ್ನು ಕೊಂದು ಆತ್ಮಹತ್ಯೆಗೆ ಯೋಜಿಸಿದ್ದಾಗಿಯೂ, ಆಕಸ್ಮಿಕವಾಗಿ ನನ್ನ 'ಬದುಕು ಬದಲಿಸಬಹುದು' ಪುಸ್ತಕವನ್ನು ಕೈಗೆತ್ತಿಕೊಂಡವರು ಇಡೀ ರಾತ್ರಿ ಓದಿ ಮುಗಿಸಿ 'ತಾನು ಇನ್ನೆಂದಿಗೂ ಆತ್ಮಹತ್ಯೆಯ ಬಗ್ಗೆ ಯೋಚಿಸುವುದಿಲ್ಲ, ನಾನು ಬದುಕಿ ತೋರಿಸುತ್ತೇನೆ' ಎಂದು ಬರೆದಿದ್ದರು. ಆಕೆಗೆ ಬದುಕುವ ಧೈರ್ಯವನ್ನು, ಛಲವನ್ನು ನೀಡಿದ್ದು ನನ್ನ ಬರವಣಿಗೆ ಅಲ್ಲ, ನಾನು ಉಲ್ಲೇಖಿಸಿರುವ ಆ ಎಲ್ಲ ಸಕಾರಾತ್ಮಕ ವ್ಯಕ್ತಿಗಳು ಎಂದು ನನಗೆ ಅರಿವಿತ್ತು. ಆದರೆ ಅಂತಹ ವ್ಯಕ್ತಿಗಳನ್ನು ಪರಿಚಯಿಸಲು ನಾನು ತೆಗೆದುಕೊಳ್ಳುವ ಶ್ರಮ ಸಾರ್ಥಕವಾಯಿತು ಅನಿಸಿತ್ತು.

◆ **ಕನ್ನಡದಲ್ಲಿ ಭಿನ್ನಧಾರೆಯ ಸ್ತ್ರೀವಾದಗಳು ಇವೆ. ಬದಲಾದ ಈ ಕಾಲದಲ್ಲಿ ಸ್ತ್ರೀವಾದವನ್ನು ಹೇಗೆ ನೋಡುತ್ತೀರಿ? ಸ್ತ್ರೀವಾದ ನಿಮ್ಮ ಒಟ್ಟಾರೆ ಬದುಕಿನ ಕ್ರಮ ಮತ್ತು ದೃಷ್ಟಿಕೋನದಲ್ಲಿ ತಂದ ಬದಲಾವಣೆ ಏನು ಮತ್ತು ಅದನ್ನು ಹೇಗೆ ಗುರುತಿಸುತ್ತೀರಿ?**

ನನ್ನ ಬದುಕು ಮತ್ತು ಬರಹದ ಮೇಲೆ ತೀವ್ರವಾಗಿ ಪ್ರಭಾವ ಬೀರಿರುವ ಅಂಶ ಸ್ತ್ರೀವಾದ. ಸ್ತ್ರೀವಾದ ಎಂದರೇನು ಎಂದು ತಿಳಿಯುವ ಮೊದಲೇ ನಾನು ಸ್ತ್ರೀವಾದಿಯಾಗಿದ್ದೆ. ಕಾರಣ, ಲಿಂಗಾಧಾರಿತ ಅಸಮಾನತೆಗಳು ನನ್ನಲ್ಲಿ ಅಸಹನೆ – ಆಕ್ರೋಶ ಹುಟ್ಟಿಸಿದ ಪ್ರಸಂಗಗಳು ಒಂದಲ್ಲ, ಎರಡಲ್ಲ. ಇದು ಸ್ತ್ರೀವಾದಿ ದೃಷ್ಟಿಕೋನ ಎಂದು ನಂತರದ ವರ್ಷಗಳಲ್ಲಿ ಜಗತ್ತಿನ ಸ್ತ್ರೀವಾದಿ ಚಿಂತಕಿಯರ ಬರಹಗಳ ಪರಿಚಯವಾದಾಗ ಅರಿವಾಯಿತು. ಹಾಗೆ ನೋಡಿದರೆ ಅಪ್ಪಟ ಅನಕ್ಷರಸ್ಥರಾಗಿಯೂ ನನ್ನಮ್ಮನೂ ಸ್ತ್ರೀವಾದಿಯೆ. ಬಹುತೇಕ ಅಮ್ಮಂದಿರಂತೆ 'ಅಡಿಗೆ ಕಲಿತುಕೋ, ಮನೆಗೆಲಸ ಮಾಡು. ನಾಳೆ ಮದುವೆಯಾಗಿ ಅತ್ತೆ ಮನೆಗೆ ಹೋಗಬೇಕು' ಎಂದು ಆಕೆ ಎಂದೂ ಹೇಳಿದವರಲ್ಲ. 'ಚೆನ್ನಾಗಿ ಓದಿ ಫಸ್ಟ್ ಬರಬೇಕು. ಈ ಕಸಮುಸುರೆಯಲ್ಲೇನಿದೆ?' ಎಂದು ಅಡುಗೆ ಮನೆಗೆ ಹೋಗಿಸದೆ, ಕೂತಲ್ಲಿಗೆ ತಿಂಡಿ – ಊಟ ಸಪ್ಲೈ ಮಾಡಿ ಓದಲು ಹುರಿದುಂಬಿಸಿದ್ದಳು ನನ್ನಮ್ಮ. ಅಷ್ಟೇ ಅಲ್ಲ, ಅಂತರ್ಜಾತಿ ವಿವಾಹಕ್ಕೆ ನನ್ನ ತಂದೆ 'ನಮ್ಮ ಜಾತಿ ಅಲ್ಲ' ಎಂದೇನೋ ರಾಗ ಎಳೆಯುವಾಗ, ಅಮ್ಮನ ಪ್ರತಿಕ್ರಿಯೆಯೇ ಬೇರೆ ಇತ್ತು. ಮೊಟ್ಟ ಮೊದಲಿಗೆ ಪಂಜಾಬಿ ಹುಡುಗ ಕೀರ್ತಿ ಮೈಸೂರಿಗೆ ಬಂದು,

◆ **ಈಗಾಗಲೇ ಅತ್ಯುತ್ತಮವಾದುದ್ದನ್ನು ಬರೆದಾಗಿದೆ ಅನ್ನಿಸಿದೆಯೆ? ಅಥವಾ ಇನ್ನೂ ಬರೆಯುವುದು ಬಹಳಷ್ಟಿದೆ ಅನ್ನಿಸುತ್ತದೆಯೇ?**

ಅತ್ಯುತ್ತಮದನ್ನು ಬರೆದಾಗಿದೆ ಅಂತ ಖಂಡಿತಾ ಅನಿಸಿಲ್ಲ. ಹಾಗೇನಾದರೂ ಅನಿಸಿದರೆ, ಅದು ಲೇಖಕಿಯ ಖುದ್‌ಖುಷಿ ಎಂದು ಭಾವಿಸುತ್ತೇನೆ. ಕಾಂಬೋಡಿಯಾ ಬಗ್ಗೆ, ಅಬಾರಿಜಿನಲ್ ಆಸ್ಟ್ರೇಲಿಯಾದ ಬಗ್ಗೆ ಪ್ರವಾಸ ಕಥನಗಳನ್ನು ಇನ್ನೂ ಬರೆದಿಲ್ಲ. ಈಗಷ್ಟೇ ಒಂದು ವಾರ ಅಜಂತಾ, ಎಲ್ಲೋರಾ ಗುಹೆಗಳಲ್ಲಿ ಕಳೆದು ಬಂದಿರುವೆ. ಶತಶತಮಾನಗಳು ಕಠಿಣ ಶಿಲೆಯಲ್ಲಿ ಕಡೆಯುತ್ತಲೇ ಹೋದದ್ದು ಹೇಗೆ? ಕಗ್ಗತ್ತಲೆಯ ಗುಹೆಗಳಲ್ಲಿ ನನಗೆ ಕಂಡ ಆ ಕೆಲವು ಶಾಸನಗಳು, ಕಲ್ಲಿನಲ್ಲಿ ಕೊರೆದ ಆ ಕುತೂಹಲದ ಚಿತ್ರಗಳಿಗೆ ಎಲ್ಲಾದರೂ ಉತ್ತರಗಳು ಸಿಗಬಹುದೆ? ಕೊನೆಯಿಲ್ಲದ ಪಟ್ಟಿ ನನ್ನಲ್ಲಿದೆ. ತಂದೆಯವರು ಬದುಕಿನ ಕೊನೆಯವರೆಗೂ ಬರೆದರು. ಬಹುಶಃ ನಾನೂ ಕೂಡಾ ಪೆನ್ನು ಕೆಳಗಿಟ್ಟು ಹೊರಟಾಗ, 'ಅರೆ, ಬರೆಯುವುದು ಬಹಳ ಇತ್ತಲ್ಲ' ಎಂಬ ಭಾವದಲ್ಲಿಯೇ ವಿದಾಯ ಹೇಳುವೆ.